# ಮೆಸೇಜ್ ನೋಟಿಫಿಕೇಷನ್ ಮ್ಯೂಟ್ ಮಾಡಿ!

**■ ಶಶಿಕುಮಾರ ಸಿ.**

ವಾಟ್ಸ್‌ಆ್ಯಪ್ ಅತಿ ಹೆಚ್ಚು ಸಕ್ರಿಯ ಬಳಕೆದಾರರನ್ನು ಹೊಂದಿರುವ ಇನ್‌ಸ್ಟಂಟ್ ಮೆಸೆಜಿಂಗ್ ಆ್ಯಪ್. ಕಿರಿಕಿರಿ ಎನಿಸುವ ಸಮಸ್ಯೆಯೊಂದಕ್ಕೆ ಪರಿಹಾರವಾಗಿ ವಾಟ್ಸ್‌ಆ್ಯಪ್ ಈಚೆಗೆ ಹೊಸ ಫೀಚರ್ ಅನ್ನು ಪರಿಚಯಿಸಿದೆ. ಅದುವೇ ನೋಟಿಫಿಕೇಷನ್ ಮ್ಯೂಟ್ ಆಯ್ಕೆಯು.

ವಾಟ್ಸ್‌ಆ್ಯಪ್ ಇದೀಗ ಮ್ಯೂಟ್ ಆಯ್ಕೆಯಲ್ಲಿ ಹೊಸತನ ಅಳವಡಿಸಿದ್ದು, ಬಳಕೆದಾರರು ತಮ್ಮ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ಅಥವಾ ವೈಯಕ್ತಿಕ ಚಾಟ್ ಅನ್ನು ಶಾಶ್ವತವಾಗಿ ಮ್ಯೂಟ್ ಮಾಡಬಹುದಾದ ಆಯ್ಕೆಯನ್ನು ಪರಿಚಯಿಸಿದೆ. ಈ ಆಯ್ಕೆಯು ಸದ್ಯ ವಾಟ್ಸ್‌ಆ್ಯಪ್ ಬೀಟಾ ಬಳಕೆದಾರರಿಗೆ ಮಾತ್ರ ಲಭ್ಯವಾಗಲಿದೆ.

ಈ ಆ್ಯಪ್‌ನಲ್ಲಿ 8 ಗಂಟೆ, ಒಂದು ದಿನ ಅಥವಾ ಒಂದು ವರ್ಷದವರೆಗೆ ಮ್ಯೂಟ್ ಮಾಡುವ ಆಯ್ಕೆಯನ್ನು ನೀಡಿತ್ತು. ಆದರೆ ಈಗ ಮ್ಯೂಟ್ ಆಲ್ವೇಸ್ (ಶಾಶ್ವತವಾಗಿ ಮ್ಯೂಟ್) ಎಂಬ ಹೊಸ ಆಯ್ಕೆಯನ್ನು ಸೇರಿಸಿದೆ. ಮೆಸೇಜಿಂಗ್ ಅಪ್ಲಿಕೇಷನ್‌ನ ಬೀಟಾ ಬಳಕೆದಾರರಿಗೆ ಈ ವಿಶೇಷತೆಯು ಪ್ರಸ್ತುತ ಲಭ್ಯವಿದೆ.



## ಗ್ರೂಪ್ ಮೆಸೆಜ್: ಮ್ಯೂಟ್ ಮಾಡಿ

ಪ್ರತಿಯೊಬ್ಬ ವಾಟ್ಸ್‌ಆ್ಯಪ್ ಬಳಕೆದಾರರೂ ಒಂದಲ್ಲ ಒಂದು ಗ್ರೂಪ್‌ಗಳಲ್ಲಿ ಇರುತ್ತಾರೆ. ಕೆಲವರಂತೂ ಹಲವಾರು ಗ್ರೂಪ್‌ಗಳಲ್ಲಿ ಇರುತ್ತಾರೆ. ಈ ಎಲ್ಲ ಗ್ರೂಪ್‌ಗಳಿಂದ ನಿರಂತರವಾಗಿ ಮೆಸೇಜ್‌ಗಳು ಬರುತ್ತಲೇ ಇರುತ್ತವೆ. ಆಗ ಒಂದೊಂದು ಮೆಸೇಜ್‌ಗೂ ಒಂದೊಂದು ನೋಟಿಫಿಕೇಷನ್ ಸೌಂಡ್ ಕೇಳಿಬರುತ್ತದೆ. ಅದು ಬಳಕೆದಾರರಿಗೆ ಕಿರಿಕಿರಿ ಉಂಟುಮಾಡುತ್ತದೆ. ಆ ಸೌಂಡ್ ಅನ್ನು ನಿಲ್ಲಿಸಲು ಈ ಹೊಸ ಆಯ್ಕೆಯು ಸಹಕಾರಿ. ನಿರ್ದಿಷ್ಟ ಗ್ರೂಪ್‌ಗಳಿಂದ ಹೊರಲಾಗದವರು ಈ ಆಯ್ಕೆಯ ಮೊರೆ ಹೋಗಬಹುದು. ಯಾವ ಗ್ರೂಪ್‌ಗಳಿಂದ ಮತ್ತು ಯಾವ ವ್ಯಕ್ತಿಗಳಿಂದ ಬರುವ ಮೆಸೇಜ್‌ಗಳ ನೋಟಿಫಿಕೇಷನ್ ಸೌಂಡ್ ಅನ್ನು ಮ್ಯೂಟ್ ಮಾಡಬೇಕು ಎಂಬುದನ್ನು ಬಳಕೆದಾರರು ನಿರ್ಧರಿಸಿ ಮ್ಯೂಟ್ ಮಾಡುವ ಆಯ್ಕೆಯನ್ನು ನೀಡಲಾಗಿದೆ.

## ಮ್ಯೂಟ್ ಮಾಡುವುದೇಗೆ?

- ಮೊದಲು ವಾಟ್ಸ್‌ಆ್ಯಪ್ ಖಾತೆಯನ್ನು ತೆರೆಯಬೇಕು.
- ಯಾವ ಗ್ರೂಪ್ ಅಥವಾ ಯಾವ ವ್ಯಕ್ತಿಯ ಮೆಸೇಜ್ ನೋಟಿಫಿಕೇಷನ್ ಮ್ಯೂಟ್ ಮಾಡಬೇಕೋ ಅಂಥಹ ಗ್ರೂಪ್ ಮತ್ತು ಅಂತಹ ವ್ಯಕ್ತಿಗಳ ಹೆಸರನ್ನು ಸೆಲೆಕ್ಟ್ ಮಾಡಬೇಕು.
- ಸೆಲೆಕ್ಟ್ ಮಾಡಿದ್ದರ ಮೇಲೆ ಗ್ರೂಪ್ ಲಾಂಗ್ ಪ್ರೆಸ್ ಮಾಡಿ.
- ಆಗ ಮೇಲ್ಭಾಗದಲ್ಲಿ ಕಾಣಿಸುವ ಮ್ಯೂಟ್ ಐಕಾನ್ ಅನ್ನು ಒತ್ತಿರಿ.

## ಹೀಗೂ ಮಾಡಿ

- ವಾಟ್ಸ್‌ಆ್ಯಪ್ ಖಾತೆ ತೆರೆಯಿರಿ
- ಮ್ಯೂಟ್ ಮಾಡಬಯಸುವ ಗ್ರೂಪ್ ಸೆಲೆಕ್ಟ್ ಮಾಡಿ.
- ಗ್ರೂಪ್ ತೆರೆಯಿರಿ, ಹಾಗೂ ಕಾಣಿಸುವ ಮೂರು ಡಾಟ್ ಮೆನು ತೆರೆಯಿರಿ.
- ಅಲ್ಲಿ ಕಾಣಿಸುವ ಆಯ್ಕೆಗಳಲ್ಲಿ ಮ್ಯೂಟ್ ನೋಟಿಫಿಕೇಷನ್ ಆಯ್ಕೆ ಒತ್ತಿರಿ.

## ಇನ್ನೂ ಮೂರು ಆಯ್ಕೆಗಳು

ವಾಟ್ಸ್‌ಆ್ಯಪ್ ಗ್ರೂಪ್ ಮೆಸೇಜ್ ನೋಟಿಫಿಕೇಷನ್ ಶಾಶ್ವತ ಮ್ಯೂಟ್ ಮಾಡುವ ಬದಲು ಇನ್ನೂ ಮೂರು ಆಯ್ಕೆಗಳನ್ನು ನೀಡಲಾಗಿದೆ. ಕ್ರಮವಾಗಿ 8 ಗಂಟೆ, ಒಂದು ವಾರ ಮತ್ತು ಒಂದು ವರ್ಷದ ವರೆಗೆ ಮ್ಯೂಟ್ ಮಾಡುವ ಆಯ್ಕೆ. ಬಳಕೆದಾರರು ಯಾವ ಅವಧಿಗೆ ಮ್ಯೂಟ್ ಮಾಡಬೇಕೊ ಆ ಆಯ್ಕೆಯನ್ನು ಸೆಲೆಕ್ಟ್ ಮಾಡಿದರೇ ಆಯಿತು. ಸೆಲೆಕ್ಟ್ ಮಾಡಿರುವ ಅವಧಿಯವರೆಗೂ ಮೆಸೇಜ್‌ಗಳ ನೋಟಿಫಿಕೇಷನ್ ಕಿರಿಕಿರಿ ಇರದು. ■

## ಅಮೆಜಾನ್ ಪ್ರಾದೇಶಿಕ ಭಾಷಾಮಯ

ಅಮೆಜಾನ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಾದೇಶಿಕ ಭಾಷೆಗಳಿಗೆ ಅವಕಾಶ ಕಲ್ಪಿಸಿದೆ. ತನ್ನ ಶಾಪಿಂಗ್ ತಾಣದಲ್ಲಿ ಕನ್ನಡ, ಮಲಯಾಳಂ, ತಮಿಳು ಮತ್ತು ತೆಲುಗು ಭಾಷೆಗಳನ್ನು ಸಹ ಸೇರಿಸಿದೆ.

ಭಾರತದಲ್ಲಿ ಭಾರತೀಯ ಭಾಷಾ ಬೆಂಬಲವನ್ನು ಇನ್ನಷ್ಟು ವಿಸ್ತಾರ ಮಾಡಿ ಅದರ ಮೂಲಕ ತನ್ನ ವ್ಯಾಪಾರ ವಹಿವಾಟನ್ನು ಹೆಚ್ಚಿಸಿಕೊಳ್ಳುವ ಸದುದ್ದೇಶದಿಂದ ಈ ನಿರ್ಧಾರ ಮಾಡಿದೆ.

ಹಿಂದಿ ಭಾಷೆಯ ಅಳವಡಿಕೆ ಮಾಡಿ ಸುಮಾರು ಎರಡು ವರ್ಷಗಳೇ ಕಳೆದಿದೆ. ಈ ನಡುವೆ ದೇಶದೆಲ್ಲಡೆ ಹಿಂದಿ ಹೇರಿಕೆಯ ವಿರುದ್ಧ ದನಿ ಕೇಳಿಬರುತ್ತಿದ್ದು, ಈ ಬೆನ್ನಲ್ಲೇ ಅಮೆಜಾನ್ ಕನ್ನಡ ಸೇರಿದಂತೆ ನಾಲ್ಕು ಭಾಷೆಗಳನ್ನು ಅಳವಡಿಸಿಕೊಂಡಿದೆ. ಇನ್ನು ಗ್ರಾಹಕರು ತಮ್ಮ ಆ್ಯಂಡ್ರಾಯ್ಡ್ ಅಥವಾ ಐಓಎಸ್ ಡಿವೈಸ್‌ಗಳಲ್ಲಿ ಅಮೆಜಾನ್ ಅಪ್ಲಿಕೇಷನ್‌ನಿಂದ ತಮ್ಮ ಆದ್ಯತೆಯ ಭಾಷೆಯನ್ನು ಆಯ್ಕೆ ಮಾಡಬಹುದು. ಇದರಿಂದ ಶಾಪಿಂಗ್ ತಾಣದಲ್ಲಿ ವಿವಿಧ ಅಂಶಗಳನ್ನು ಭಾಷಾಂತರಿಸಲು ಅನುಕೂಲವಾಗಲಿದೆ.

ಶಾಪಿಂಗ್ ತಾಣಕ್ಕೆ ಎಂಟ್ರಿ ನೀಡುವ ಗ್ರಾಹಕರು ತಮ್ಮ ನೆಚ್ಚಿನ ಪ್ರಾಡಕ್ಟ್‌ಗನ್ನು ಆಯ್ಕೆ ಮಾಡುವುದಕ್ಕೆ ಭಾಷೆ ಸಮಸ್ಯೆ ಎದುರಿಸುವ ಸಾಧ್ಯತೆ ಇರುತ್ತದೆ. ಇದೇ ಕಾರಣಕ್ಕೆ ಸ್ಥಳಿಯ ಭಾಷೆಗೆ ಆದ್ಯತೆ ನೀಡಿದರೆ ಸ್ಥಳೀಯ ಗ್ರಾಹಕರಲ್ಲಿ ಸುಲಭವಾಗಿ ಅರ್ಥಮಾಡಿಕೊಳ್ಳಲು ಅನುಕೂಲವಾಗಲಿದೆ. ■


ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.